# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು – 570 006.

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/1126/2023-24 ದಿನಾಂಕ:16.08.2023

## ಅಧಿಸೂಚನೆ

ವಿಷಯ: ಕರ್ನಾಟಕ ಸಾರ್ವಜನಿಕ ಉದ್ಯೋಗ ನಿಯಮ ಅನುಚ್ಛೇದ 371 (ಜೆ) ಅನುಸಾರ ಹೈದ್ರಾಬಾದ್- ಕರ್ನಾಟಕ ವ್ಯಾಪ್ತಿಯ ಸ್ಥಳೀಯ ಅಭ್ಯರ್ಥಿಗಳಿಗೆ ವಿವಿಧ ಬೋಧಕೇತರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 06 ಪಿಎಲ್ಎಕ್ಸ್ 2012, ದಿನಾಂಕ: 06.11.2013.

2. ಸರ್ಕಾರದ ಅಪರ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರಿಂದ ಅನುಮೋದನೆ ಪತ್ರ ಸಂಖ್ಯೆ: ಇಡಿ 60 ಯುಓವಿ 2015 (ಭಾ-1), ದಿನಾಂಕ: 21.12.2016.
3. ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/883/2013-14/ಸಿ.ನಂ:1308,ದಿನಾಂಕ: 27.01.2017.
4. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ: 18.07.2023ರಂದು ಜರುಗಿದ ಶೈಕ್ಷಣಿಕ ಮಂಡಳಿಯ ವಿಶೇಷ ಸಭೆಯ ಅನುಮೋದನೆ.
5. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ: 27.07.2023ರಂದು ಜರುಗಿದ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಯ ಅನುಮೋದನೆ.
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.08.2023.

* * * * * * *

ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಬೋಧಕೇತರ ಹುದ್ದೆಗಳಿಗೆ ಹೈದ್ರಾಬಾದ್-ಕರ್ನಾಟಕ ಮೀಸಲಾತಿ ನಿಯಮ ಅನುಚ್ಛೇದ 371 (ಜೆ) ರನ್ವಯ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯ **"ಸ್ಥಳೀಯ ಅಭ್ಯರ್ಥಿ"**ಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಈ ಮೂಲಕ ಅಧಿಸೂಚಿಸಲಾಗಿದೆ. ಸದರಿ ಅನುಚ್ಛೇದ 371 (ಜೆ) ರ ನಿಯಮಗಳನುಸಾರ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://ksoumysuru.ac.in/ ನಿಂದ ಅರ್ಜಿ ನಮೂನೆಯನ್ನು (Application Form) ಡೌನ್‌ಲೋಡ್ ಮಾಡಿಕೊಂಡು, ಅರ್ಜಿಗಳನ್ನು 08(ಎಂಟು) ಸೆಟ್‌ಗಳಲ್ಲಿ ಭರ್ತಿ ಮಾಡಿ ಸಂಬಂಧಪಟ್ಟ ಹುದ್ದೆಗಳಿಗೆ ಅವಶ್ಯವಿರುವ ದಾಖಲೆಗಳ ಪ್ರತಿಗಳನ್ನು ಅರ್ಜಿಗಳೊಂದಿಗೆ ಲಗತ್ತಿಸಿ (ಎಲ್ಲಾ ಎಂಟು ಸೆಟ್ ಅರ್ಜಿಗಳಿಗೆ) ಲಕೋಟೆಯಲ್ಲಿರಿಸಿ, ಲಕೋಟೆಯ ಮೇಲೆ **"ಹೈದ್ರಾಬಾದ್ – ಕರ್ನಾಟಕ ಸ್ಥಳೀಯ ಬೋಧಕೇತರ ಹುದ್ದೆಗಾಗಿ ಅರ್ಜಿ ಮತ್ತು ಹುದ್ದೆಯ ಹೆಸರು"** ಅನ್ನು ನಮೂದಿಸಿ, **ದಿನಾಂಕ 30.09.2023ರ ಸಂಜೆ 4.00ಗಂಟೆರೊಳಗೆ – ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006,** ಇವರಿಗೆ ನೋಂದಣಿ ಅಂಚೆ ಅಥವಾ ಮುದ್ದಾಂ (ಖುದ್ದಾಗಿ) ತಲುಪುವಂತೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಪ್ರಸ್ತುತ ಸೇವೆಯಲ್ಲಿರುವ ಅಭ್ಯರ್ಥಿಗಳು ಸಹ ಅರ್ಜಿಗಳನ್ನು ಸಮುಚಿತ ಮಾರ್ಗದಲ್ಲಿ ಮೇಲ್ಕಂಡ ದಿನಾಂಕದೊಳಗೆ ಸಲ್ಲಿಸಲು ತಿಳಿಸಲಾಗಿದೆ.

**:ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವ ಹುದ್ದೆಗಳ ವಿವರ:**

| ಕ್ರ.ಸಂ | ಹುದ್ದೆಗಳ ಹೆಸರು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಮೀಸಲಾತಿ | ವಿದ್ಯಾರ್ಹತೆ: |
|---|---|---|---|---|
| | | **ಗ್ರೂಪ್ – 'ಸಿ' ಹುದ್ದೆಗಳು** | | |
| 1 | ಪ್ರಥಮ ದರ್ಜೆ ಸಹಾಯಕ<br>(ವೇತನ ಶ್ರೇಣಿ:30350-58250) | 04 | ಪ.ಜಾ – 1 (ಇತರೆ),<br>ಪ.ಪ – 1 (ಇತರೆ),<br>ಸಾಮಾನ್ಯ-2<br>(ಇತರೆ-1, ಮಹಿಳೆ-1) | 1. ಯು.ಜಿ.ಸಿ ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದಾದರೊಂದು ಸ್ನಾತಕ ಪದವಿಯಲ್ಲಿ ಉತ್ತೀರ್ಣರಾಗಿರಬೇಕು.<br>2. ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯ ಮೂಲಕ ಕಂಪ್ಯೂಟರ್ ಕಾರ್ಯ ನಿರ್ವಹಣಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಆಫೀಸ್ ಆಟೋಮೇಷನ್ ಟೂಲ್ಸ್ ಮೂಲಕ ಕನಿಷ್ಠ 05 ವರ್ಷಗಳ ಕಾರ್ಯನಿರ್ವಹಣಾ ಅನುಭವ ಹೊಂದಿರಬೇಕು. |
| 2 | ಡೇಟಾ ಎಂಟ್ರಿ ಆಪರೇಟರ್<br>(ವೇತನ ಶ್ರೇಣಿ:27650-52650) | 05 | ಪ.ಜಾ – 1 (ಇತರೆ),<br>ಪ.ಪ – 1 (ಇತರೆ),<br>ಸಾಮಾನ್ಯ-2<br>(ಇತರೆ-1, ಮಹಿಳೆ-1),<br>ಪ್ರವರ್ಗ-I – 1(ಇತರೆ) | 1. ಯು.ಜಿ.ಸಿ ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದಾದರೊಂದು ಸ್ನಾತಕ ಪದವಿಯಲ್ಲಿ ಉತ್ತೀರ್ಣರಾಗಿರಬೇಕು.<br>ಅಥವಾ<br>ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತೀರ್ಣರಾಗಿದ್ದು, ಡಾಟ ಎಂಟ್ರಿ ಆಪರೇಟರ್/ ಡಾಟ ಎಂಟ್ರಿ ಆಪರೇಟರ್-ಕಂ-ಅಸಿಸ್ಟೆಂಟ್‌ರಾಗಿ ಸರ್ಕಾರದ/ |

| | | | | |
|---|---|---|---|---|
| | | | | ವಿಶ್ವವಿದ್ಯಾನಿಲಯಗಳ/ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಠ ಐದು ವರ್ಷಗಳ ಕಾರ್ಯಾನುಭವ ಇರತಕ್ಕದ್ದು.<br>2. ಸರ್ಕಾರದಿಂದ ಮಾನ್ಯತೆ ಪಡೆದ ಕಂಪ್ಯೂಟರ್ ತರಬೇತಿ ಸಂಸ್ಥೆಯಿಂದ ಕಂಪ್ಯೂಟರ್ ಫಂಡಮೆಂಟಲ್ಸ್ (Computer Basics) ಮತ್ತು ಆಫೀಸ್ ಆಟೋಮೇಷನ್ ಪರಿಕರಗಳ (Office Automation Tools) ಕಾರ್ಯ ನಿರ್ವಹಣೆಯ ಜ್ಞಾನವನ್ನು ಹೊಂದಿರುತ್ತಾರೆಂದು ಅಧಿಕೃತವಾಗಿ ನೀಡಲಾಗುವ ದೃಢೀಕೃತ ಪ್ರಮಾಣ ಪತ್ರವನ್ನು ಪಡೆದಿರತಕ್ಕದ್ದು.<br>3. ಡೆಸ್ಕ್ ಟಾಪ್ ಪಬ್ಲಿಷಿಂಗ್ ಸಾಫ್ಟ್‌ವೇರ್ ಕಾರ್ಯ ನಿರ್ವಹಣಾ ಜ್ಞಾನವನ್ನು ಹೊಂದಿರತಕ್ಕದ್ದು.<br>4. ವಿಶ್ವವಿದ್ಯಾನಿಲಯದ ಡಿ.ಟಿ.ಪಿ/ಡಿ.ಇ.ಓ ಅರ್ಹತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. |
| 3 | ದ್ವಿತೀಯ ದರ್ಜೆ ಸಹಾಯಕ<br>(ವೇತನ ಶ್ರೇಣಿ:21400-42000) | 08 | ಪ.ಜಾ – 1 (ಇತರೆ),<br>ಪ.ಪ – 1 (ಇತರೆ),<br>ಸಾಮಾನ್ಯ-4(ಇತರೆ-1, ಮಹಿಳೆ-1, ಗ್ರಾಮೀಣ-1, ವಿಶೇಷ ಚೇತನರು – 1),<br>ಪ್ರವರ್ಗ-I-1(ಇತರೆ),<br>ಪ್ರವರ್ಗ-2ಎ-1(ಇತರೆ) | 1. ಯು.ಜಿ.ಸಿ ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದಾದರೊಂದು ಸ್ನಾತಕ ಪದವಿಯಲ್ಲಿ ತೇರ್ಗಡೆ/ಉತ್ತೀರ್ಣರಾಗಿರಬೇಕು.<br>ಅಥವಾ<br>ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸರ್ಕಾರದ/ ವಿಶ್ವವಿದ್ಯಾನಿಲಯಗಳ /ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು.<br>ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ವ್ಯಾಸಂಗ ಮಾಡಿರಬೇಕು ಅಥವಾ ವಿಶ್ವವಿದ್ಯಾನಿಲಯ/ಸರ್ಕಾರವು ನಡೆಸುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ತೇರ್ಗಡೆ ಹೊಂದಿರಬೇಕು.<br>3. ಕಂಪ್ಯೂಟರ್ ಬಗ್ಗೆ ಕನಿಷ್ಠ ವಿದ್ಯಾರ್ಹತೆ ಹಾಗೂ ಆಫೀಸ್ ಆಟೋಮೇಷನ್ ಟೂಲ್ಸ್‌ನಲ್ಲಿ ಕಾರ್ಯನಿರತ ಅನುಭವ ಹೊಂದಿರುವ ಬಗ್ಗೆ ಮಾನ್ಯತೆ ಪಡೆದಿರುವ ಸಂಸ್ಥೆಗಳಿಂದ ಪ್ರಮಾಣ ಪತ್ರ ಹೊಂದಿರತಕ್ಕದ್ದು.<br>4. ಸರ್ಕಾರದ/ ವಿಶ್ವವಿದ್ಯಾನಿಲಯದ/ ಇತರೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಠ ಐದು ವರ್ಷಗಳ ಸೇವಾನುಭವ ಹೊಂದಿರಬೇಕು. |
| 4 | ಬೆರಳಚ್ಚುಗಾರ ಮತ್ತು ಸಹಾಯಕ<br>(ವೇತನ ಶ್ರೇಣಿ:21400-42000) | 01 | ಸಾಮಾನ್ಯ-1(ಇತರೆ) | 1. ಯು.ಜಿ.ಸಿ ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದಾದರೊಂದು ಸ್ನಾತಕ ಪದವಿಯಲ್ಲಿ ತೇರ್ಗಡೆ/ಉತ್ತೀರ್ಣರಾಗಿರಬೇಕು.<br>ಅಥವಾ<br>ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಟೈಪಿಸ್ಟ್ ಕಂ ದ್ವಿತೀಯ ದರ್ಜೆ ಸಹಾಯಕರಾಗಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸರ್ಕಾರ/ವಿಶ್ವವಿದ್ಯಾನಿಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು.<br>2.ಸರ್ಕಾರದ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ನಡೆಸಲಾಗುವ ಕನ್ನಡ ಮತ್ತು ಇಂಗ್ಲೀಷ್ ಸೀನಿಯರ್ ಗ್ರೇಡ್ ಬೆರಳಚ್ಚು ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು.<br>3. ಸರ್ಕಾರದಿಂದ ಮಾನ್ಯತೆ ಪಡೆದ ಕಂಪ್ಯೂಟರ್ ತರಬೇತಿ ಸಂಸ್ಥೆಯಿಂದ ಕಂಪ್ಯೂಟರ್ ಫಂಡಮೆಂಟಲ್ಸ್ (Computer Basics) ಮತ್ತು ಆಫೀಸ್ ಆಟೋಮೇಷನ್ ಪರಿಕರಗಳ (Office Automation Tools) ಕಾರ್ಯ ನಿರ್ವಹಣೆಯ ಜ್ಞಾನವನ್ನು ಹೊಂದಿರುತ್ತಾರೆಂದು ದೃಢೀಕರಣ ಪ್ರಮಾಣ ಪತ್ರ ಪಡೆದಿರತಕ್ಕದ್ದು.<br>4. ವಿಶ್ವವಿದ್ಯಾನಿಲಯದ ಡಿ.ಟಿ.ಪಿ/ಡಿ.ಇ.ಓ ಅರ್ಹತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. |
| 5 | ವಾಹನ ಚಾಲಕ<br>(ವೇತನ ಶ್ರೇಣಿ:21400-42000) | 01 | ಸಾಮಾನ್ಯ-1(ಇತರೆ) | ಹತ್ತನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಚಾಲ್ತಿಯಲ್ಲಿರುವ ಭಾರೀ ವಾಹನ ಚಾಲನೆ ಪರವಾನಿಗೆ ಹೊಂದಿದ್ದು, ಪ್ರಥಮ ಚಿಕಿತ್ಸೆ ಬಗ್ಗೆ ಮಾನ್ಯತೆ ಪಡೆದ ಸಂಸ್ಥೆಯಿಂದ ದೃಢೀಕರಣ ಪತ್ರವನ್ನು ಪಡೆದಿರಬೇಕು ಮತ್ತು ಕನಿಷ್ಠ ಮೂರು ವರ್ಷಗಳ ಭಾರೀ ವಾಹನ ಚಾಲನಾ ಅನುಭವ ಹೊಂದಿರತಕ್ಕದ್ದು. |

| | | | | |
|---|---|---|---|---|
| 6 | ಎಲೆಕ್ಟ್ರೀಷಿಯನ್<br>(ವೇತನ ಶ್ರೇಣಿ:21400-42000) | 01 | ಸಾಮಾನ್ಯ-1(ಇತರೆ) | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು, ಡಿಪ್ಲೋಮಾ ಇನ್ ಎಲೆಕ್ಟ್ರೀಕಲ್ ಇಂಜಿನಿಯರಿಂಗ್ ಅಥವಾ ಸರ್ಕಾರದ ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನಡೆಸಲಾಗುವ ಐಟಿಐ ಎಲೆಕ್ಟ್ರಿಕಲ್ ಕೋರ್ಸ್‌ನಲ್ಲಿ ತೇರ್ಗಡೆ ಹೊಂದಿರಬೇಕು ಹಾಗೂ ಎಲೆಕ್ಟ್ರೀಷಿಯನ್ ಕಾರ್ಯ ನಿರ್ವಹಣೆಯಲ್ಲಿ ಕನಿಷ್ಠ ಐದು ವರ್ಷಗಳ ಸೇವಾನುಭವವನ್ನು ಹೊಂದಿರಬೇಕು. |
| 7 | ಪ್ಲಂಬರ್<br>(ವೇತನ ಶ್ರೇಣಿ:21400-42000) | 01 | ಸಾಮಾನ್ಯ-1(ಇತರೆ) | 1. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಪ್ಲಂಬಿಂಗ್ ಮತ್ತು ಸಿವಿಲ್ ಕಾರ್ಯ ನಿರ್ವಹಣೆಯಲ್ಲಿ ಕನಿಷ್ಠ ಎರಡು ವರ್ಷಗಳ ಸೇವಾನುಭವವನ್ನು ಹೊಂದಿರಬೇಕು ಅಥವಾ ಏಳನೇ ತರಗತಿ ಉತ್ತೀರ್ಣರಾಗಿದ್ದು ಪ್ಲಂಬಿಂಗ್ ಮತ್ತು ಸಿವಿಲ್ ಕಾರ್ಯ ನಿರ್ವಾಹಣೆಯಲ್ಲಿ ಕನಿಷ್ಠ ಐದು ವರ್ಷಗಳ ಸೇವಾನುಭವವನ್ನು ಹೊಂದಿರತಕ್ಕದ್ದು. |
| | | **ಗ್ರೂಪ್ - 'ಡಿ' ಹುದ್ದೆಗಳು** | | |
| 1 | ಪರಿಚಾರಕ<br>(ವೇತನ ಶ್ರೇಣಿ:19950-37900) | 02 | ಪ.ಜಾ - 1 (ಇತರೆ),<br>ಸಾಮಾನ್ಯ-1 (ಇತರೆ) | 1. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.<br>2. ಎಸ್.ಎಸ್.ಎಲ್.ಸಿ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಡನೆ ಲಗತ್ತಿಸಬೇಕು. ಲಗತ್ತಿಸದಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. |
| 2 | ಗ್ಯಾಂಗ್‌ಮೆನ್<br>(ವೇತನ ಶ್ರೇಣಿ:18600-32600) | 01 | ಸಾಮಾನ್ಯ-1(ಇತರೆ) | 1. ಹತ್ತನೇ ತರಗತಿ ಅಥವಾ ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿ, ಗ್ಯಾಂಗ್ ಮನ್ ಕಾರ್ಯದಲ್ಲಿ ಕನಿಷ್ಠ ಐದು ವರ್ಷಗಳ ಅನುಭವ ಹೊಂದಿರಬೇಕು.<br>2. ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಐದು ವರ್ಷಗಳ ಅನುಭವ ಹೊಂದಿರುವ ಅಭ್ಯರ್ಥಿಗಳು ಕಡ್ಡಾಯವಾಗಿ ಏಳನೇ ತರಗತಿಯ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರದ ಪ್ರತಿಯನ್ನು ತಪ್ಪದೇ ಅರ್ಜಿಯೊಡನೆ ಲಗತ್ತಿಸಬೇಕಾಗಿರುತ್ತದೆ. ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. |
| 3 | ಸೇವಕ<br>(ವೇತನ ಶ್ರೇಣಿ:17000-28950) | 05 | ಪ.ಜಾ - 1 (ಇತರೆ),<br>ಪ.ಪ - 1 (ಇತರೆ),<br>ಸಾಮಾನ್ಯ-2<br>(ಇತರೆ-1, ಮಹಿಳೆ-1),<br>ಪ್ರವರ್ಗ-I-1(ಇತರೆ) | 1. ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು.<br>2. ಏಳನೇ ತರಗತಿಯ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಡನೆ ಲಗತ್ತಿಸಬೇಕು. ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. |
| 4 | ಸ್ವೀಪರ್<br>(ವೇತನ ಶ್ರೇಣಿ:17000-28950) | 02 | ಪ.ಜಾ - 1 (ಇತರೆ),<br>ಸಾಮಾನ್ಯ-1 (ಇತರೆ) | 1. ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು.<br>2. ಏಳನೇ ತರಗತಿಯ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಡನೆ ಲಗತ್ತಿಸಬೇಕು. ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. |
| 5 | ಹೆಲ್ಪರ್<br>(ವೇತನ ಶ್ರೇಣಿ:17000-28950) | 01 | ಸಾಮಾನ್ಯ-1(ಇತರೆ) | 1. ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು.<br>2. ಏಳನೇ ತರಗತಿಯ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಡನೆ ಲಗತ್ತಿಸಬೇಕು. ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. |

**ವಯೋಮಿತಿ: ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 55 ಸೇನೇನಿ 2008 ದಿನಾಂಕ:15.01.2009ರನ್ವಯ ವಯೋಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.**

- ಪ.ಜಾ/ಪ.ಪಂ/ಪ್ರ ವರ್ಗ-I- ಕನಿಷ್ಠ - 18 ವರ್ಷ ಗರಿಷ್ಠ - 40 ವರ್ಷಗಳು.
- ಹಿಂದುಳಿದ ವರ್ಗಗಳು - ಕನಿಷ್ಠ - 18 ವರ್ಷ ಗರಿಷ್ಠ - 38 ವರ್ಷಗಳು.
- ಸಾಮಾನ್ಯ ವರ್ಗ- ಕನಿಷ್ಠ - 18 ವರ್ಷ ಗರಿಷ್ಠ - 35 ವರ್ಷಗಳು.
- ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ, ಅವನು ಸಶಸ್ತ್ರ ಪಡೆಗಳಲ್ಲಿ ಕನಿಷ್ಟ ಮೂರು ವರ್ಷ ಸೇವೆ ಸಲ್ಲಿಸಿರಬೇಕು. ಅಂಥವರಿಗೆ ಸೇವಾವಧಿಯ ಆಧಾರದ ಮೇಲೆ ಮತ್ತು ಅವರ ಸೇವಾವಧಿಯೊಂದಿಗೆ ಮೂರು ವರ್ಷಗಳ ವಯೋಮಿತಿ ಸಡಿಲಿಕೆಗೆ ಅವಕಾಶವಿರುತ್ತದೆ. ಆದಾಗ್ಯೂ **ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 568 ಸೇನೇನಿ 2015, ಬೆಂಗಳೂರು, ದಿನಾಂಕ:06.07.2015** ರನ್ವಯ ಗರಿಷ್ಠ ವಯೋಮಿತಿ 45 ವರ್ಷಗಳಾಗಿದೆ.

ಅರ್ಜಿ ಶುಲ್ಕ: **ರೂ.1,000/- (ಪ.ಜಾ/ಪ.ಪಂ/ಪ್ರ ವರ್ಗ- I - ರೂ.500/-).**

<u>ಸಾಮಾನ್ಯ ಸೂಚನೆಗಳು:</u>

- ನಿಗದಿತ ಅರ್ಜಿ ಶುಲ್ಕವನ್ನು ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆ **A/c No: 50100316845801, IFSC Code: HDFC0003733, HDFC Bank, Kuvempunagara Branch, Mysuru,**ಗೆ ಆನ್‌ಲೈನ್ (Online) ಮೂಲಕ ಪಾವತಿಸಿ, ಅದರ ರಶೀದಿಯನ್ನು ಅರ್ಜಿಯ ಜೊತೆಯಲ್ಲಿ ಲಗತ್ತಿಸಿ, ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಅರ್ಜಿಗಳನ್ನು ಸಲ್ಲಿಸಬೇಕು.
- ಅರ್ಜಿಯೊಂದಿಗೆ ಪಾವತಿಸುವ ಶುಲ್ಕವನ್ನು ಯಾವುದೇ ಕಾರಣಗಳಿಗಾಗಿ ಹಿಂದಿರುಗಿಸುವುದಿಲ್ಲ.
- ನೇಮಕಾತಿಗೆ ಸಂಬಂಧಿಸಿದ ಅರ್ಜಿಗಳನ್ನು 08 ಸೆಟ್‌ಗಳಲ್ಲಿ ಭರ್ತಿ ಮಾಡಿ ಸಂಬಂಧಿಸಿದ ದಾಖಲೆಗಳ ಪ್ರತಿಗಳೊಂದಿಗೆ (ಎಲ್ಲಾ ಎಂಟು ಸೆಟುಗಳಲ್ಲಿ) ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು-570 006 ಇವರಿಗೆ **ದಿನಾಂಕ:30.09.2023ರ ಸಂಜೆ 4.00 ಗಂಟೆಯೊಳಗೆ** ಸಲ್ಲಿಸತಕ್ಕದ್ದು.
- ಮೀಸಲಾತಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಅಧಿಕೃತ ಪ್ರಮಾಣ ಪತ್ರಗಳನ್ನು ಪಡೆದಿರತಕ್ಕದು.
- ನೇರ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ಪ.ಜಾ/ಪ.ಪ/ವಿಶೇಷ ಚೇತನರು/ಹಿಂದುಳಿದ ವರ್ಗಗಳ ಜಾತಿ/ಗ್ರಾಮೀಣ ಅಭ್ಯರ್ಥಿ/ಕನ್ನಡ ಮಾಧ್ಯಮ ಅಭ್ಯರ್ಥಿ/ವಿದ್ಯಾರ್ಹತೆಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿಗಳು/ಸೇವಾ ಪ್ರಮಾಣ ಪತ್ರ/ 371ಜೆ ಅಭ್ಯರ್ಥಿಗೆ ಸಂಬಂಧಿಸಿದ ಅರ್ಹತಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.
- ವಿಶ್ವವಿದ್ಯಾನಿಲಯದ ನೇರ ನೇಮಕಾತಿ ನಿಯಮಗಳನುಸಾರ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಲಾಗುವುದು. ತತ್ಸಂಬಂಧ ವಿಶ್ವವಿದ್ಯಾನಿಲಯದ ನೇಮಕಾತಿ ಪ್ರಾಧಿಕಾರದ ನಿರ್ಣಯಗಳು ಅಂತಿಮವಾಗಿರುತ್ತವೆ.
- ನೇಮಕಾತಿಗೆ ಸಂಬಂಧಿಸಿದ ಮಾಹಿತಿ ಹಾಗೂ ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ <u>https://ksoumysuru.ac.in/</u> ನಿಂದ ಡೌನ್‌ಲೋಡ್ ಮಾಡಿಕೊಂಡು ಎಂಟು ಸೆಟ್‌ಗಳಲ್ಲಿ ಭರ್ತಿ ಮಾಡಿ ನಿಗದಿತ ಶುಲ್ಕ ಹಾಗೂ ಅವಶ್ಯ ದಾಖಲೆಗಳ (ಎಂಟು ಸೆಟುಗಳ) ಪ್ರತಿಗಳೊಂದಿಗೆ ಸಲ್ಲಿಸುವುದು.
- ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಹಾಗೂ ಪ್ರತ್ಯೇಕ ಶುಲ್ಕವನ್ನು ಪಾವತಿಸುವುದು.
- ಮೇಲ್ಕಂಡ ಎಲ್ಲಾ ಹುದ್ದೆಗಳಿಗೆ ನೇಮಕ ಬಯಸುವವರು ಕನ್ನಡ ಭಾಷೆಯ ಸಾಮಾನ್ಯ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು.
- ಅರ್ಹತಾ ಪರೀಕ್ಷೆ, ಸಂದರ್ಶನ ಹಾಗೂ ನೇಮಕಾತಿ ನಂತರ ಕರ್ತವ್ಯಕ್ಕೆ ಹಾಜರಾಗುವ ಸಂಬಂಧ ಯಾವುದೇ ಭತ್ಯೆಗಳನ್ನು ನೀಡುವುದಿಲ್ಲ.
- ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಯಾವುದೇ ಕಾರ್ಯಾಲಯಗಳಲ್ಲಿ ಹಾಗೂ ಅದರ ವ್ಯಾಪ್ತಿಗೊಳಪಟ್ಟ ಯಾವುದೇ ಪ್ರಾದೇಶಿಕ ಕೇಂದ್ರಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.
- ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡುವ ವಿಳಾಸವು ಅಂತಿಮವಾಗಿದ್ದು, ನಂತರ ವಿಳಾಸ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಸೇವೆಯಲ್ಲಿರುವ (In-Service) ಅಭ್ಯರ್ಥಿಗಳು ಸಕ್ಷಮ ಸೇವಾ ಪ್ರಾಧಿಕಾರದ ಮುಖಾಂತರ ಸಮುಚಿತ ಮಾರ್ಗದಲ್ಲಿ (Through proper channel) ಅರ್ಜಿ ತಲುಪಬೇಕಾದ ಕೊನೆಯ **ದಿನಾಂಕ 30.09.2023ರ ಸಂಜೆ 4.00ಗಂಟೆಯೊಳಗೆ** ಅರ್ಜಿಗಳನ್ನು ಸಲ್ಲಿಸುವುದು. ಒಂದು ವೇಳೆ ಸಕ್ಷಮ ಪ್ರಾಧಿಕಾರದ ಮೂಲಕ ಅರ್ಜಿಯನ್ನು ಸಲ್ಲಿಸದಿದ್ದರೆ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಹುದ್ದೆಗಳಿಗೆ ಬೇರೆ ಪ್ರವರ್ಗಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
- ಅರ್ಜಿ ಶುಲ್ಕವನ್ನು ಯಾವುದೇ ಕಾರಣಗಳಿಗಾಗಿ ಹಿಂದಿರುಗಿಸಲಾಗುವುದಿಲ್ಲ.
- ನಿಗದಿಪಡಿಸಿದ ದಿನಾಂಕದ ನಂತರ ತಲುಪಿದ, ಅಪೂರ್ಣವಾಗಿರುವ ಮತ್ತು ನಿಗದಿತ ನಮೂನೆಯಲ್ಲಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಈ ವಿಷಯದಲ್ಲಿ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.
- ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪ್ರಭಾವ ಬೀರುವ ಅಭ್ಯರ್ಥಿಯ ಅಭ್ಯರ್ಥಿತನವನ್ನು ಯಾವುದೇ ಮುನ್ಸೂಚನೆ ನೀಡದೆ ಅನರ್ಹಗೊಳಿಸಲಾಗುತ್ತದೆ.
- ಆಯ್ಕೆಯಾದ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ(ಎಸ್‌ಪಿಎಲ್ )04 ಪಿಇಟಿ 2005, ಬೆಂಗಳೂರು, ಪ್ರಕಾರ ದಿನಾಂಕ:01.04.2006ರಿಂದ ಜಾರಿಗೆ ಬಂದಿರುವ ಹೊಸ ವಿಶ್ರಾಂತ ವೇತನ ಯೋಜನೆ (New Pension Scheme)ಗೆ ಒಳಪಡುತ್ತಾರೆ. ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಇತರೆ ಆದೇಶಗಳು ಹಾಗೂ ಷರತ್ತುಗಳು ಸಹ ಅನ್ವಯವಾಗುತ್ತವೆ.
- ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ(ಪರಿವೀಕ್ಷಣಾ) ನಿಯಮಗಳು – 1977ರ ಹಾಗೂ ಈ ಕುರಿತು ಕಾಲಕಾಲಕ್ಕೆ ಹೊರಡಿಸಿರುವ ನಿಯಮಗಳಿಗೆ ಒಳಪಟ್ಟಿರುತ್ತಾರೆ.
- ಆಯ್ಕೆಯಾದ ಅಭ್ಯರ್ಥಿಗಳಿಗೆ ಅರ್ಹತಾ ಪರೀಕ್ಷಾವಧಿಯು ಐದು ವರ್ಷಗಳಿರುತ್ತದೆ. ವಿಶ್ವವಿದ್ಯಾನಿಲಯವು ಬಯಸಿದಲ್ಲಿ ಈ ಅವಧಿಯನ್ನು ಮುಂದೂಡಬಹುದಾಗಿದೆ.
- ನೇಮಕಾತಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

- ಅರ್ಜಿದಾರರು, ತಮ್ಮ ಅರ್ಜಿಗಳನ್ನು ಅಂತಿಮ ದಿನಾಂಕದವರೆಗೆ ಕಾಯದೆ ಆದಷ್ಟು ಮುಂಚಿತವಾಗಿ ಕಳುಹಿಸಬೇಕು. ಅಂಚೆ ಅಥವಾ ಇನ್ನಾವುದೆ ಕಾರಣಗಳಿಗಾಗಿ ಉಂಟಾಗಬಹುದಾದ ವಿಳಂಬಗಳಿಗೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಲ್ಲ.
- ಅಗತ್ಯ ಪ್ರಮಾಣ ಪತ್ರ ಹಾಗೂ ಸಂಬಂಧಿಸಿದ ದಾಖಲೆಗಳ ಪ್ರತಿಗಳಿಲ್ಲದೆ ಬಂದಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.
- ಅಭ್ಯರ್ಥಿಯ ಅರ್ಹತೆ, ಜೇಷ್ಟತೆ, ಮೀಸಲಾತಿ ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರವೇ ಸಂಬಂಧಿತ ಅರ್ಹ ಅಭ್ಯರ್ಥಿಗಳ ಹೆಸರನ್ನು ಅರ್ಹತ ಪಟ್ಟಿಗೆ (Eligibility List) ಸೇರಿಸಲಾಗುವುದು. ಈ ಬಗ್ಗೆ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
- ನಿಗದಿತ ವಿದ್ಯಾರ್ಹತೆಯನ್ನು ಹೊಂದಿದ ಮಾತ್ರಕ್ಕೆ ಸಂದರ್ಶನಕ್ಕೆ ಕರೆಯಲಾಗುವುದೆಂದು ಅಭ್ಯರ್ಥಿಗಳು ಭಾವಿಸಬಾರದು, ಸಂದರ್ಶನಕ್ಕೆ ಕರೆಯುವ ಅಭ್ಯರ್ಥಿಗಳ ಅರ್ಹತೆಯನ್ನು ವಿಶ್ವವಿದ್ಯಾನಿಲಯದ ಸ್ಕ್ರೀನಿಂಗ್ ಕಮಿಟಿಯು ನಿರ್ಧರಿಸುತ್ತದೆ.
- ಸದರಿ ನೇಮಕಾತಿಗಳ ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಜಾಲತಾಣ (ವೆಬ್‌ಸೈಟ್ https://ksoumysuru.ac.in/)ದಲ್ಲಿ ಕಾಲಕಾಲಕ್ಕೆ ಅಧಿಸೂಚಿಸುವ ಅಧಿಸೂಚನೆ/ಸುತ್ತೋಲೆ/ಪತ್ರಗಳನ್ನು ಅಭ್ಯರ್ಥಿಗಳು ಆಗಾಗ್ಗೆ ಗಮನಿಸತಕ್ಕದ್ದು.
- ಪ್ರಸ್ತುತದ ನೇಮಕಾತಿ ಅಧಿಸೂಚನೆಯಲ್ಲಿರುವ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಮಾಡದಿರುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.

ಕುಲಸಚಿವ

ಇವರಿಗೆ,

1. ಗೌರವಾನ್ವಿತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001- ಇವರಿಗೆ ಮಾಹಿತಿಗಾಗಿ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, 5ನೆ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಸಂ 39, ಯುನೈಟೆಡ್ ಮೆನ್‌ಷನ್, 3ನೇ ಮಹಡಿ, ಎಂ.ಜಿ.ರಸ್ತೆ, ಬೆಂಗಳೂರು-1.
6. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರಿಗೆ – ಸದರಿ ಪ್ರಕಟಣೆಯನ್ನು ತಮ್ಮ ವಿಶ್ವವಿದ್ಯಾನಿಲಯದ ನೋಟಿಸ್ ಫಲಕಗಳಲ್ಲಿ ಪ್ರಕಟಿಸಲು ಕೋರಿದೆ.
7. ನಿಲಯ ನಿರ್ದೇಶಕರು, ಆಕಾಶವಾಣಿ ಕೇಂದ್ರ, ಧಾರವಾಡ/ಬೆಂಗಳೂರು/ಮಂಗಳೂರು/ಭದ್ರಾವತಿ/ಮೈಸೂರು/ಮಡಿಕೇರಿ/ಗುಲ್ಬರ್ಗಾ – ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
8. ನಿರ್ದೇಶಕರು, ದೂರದರ್ಶನ ಕೇಂದ್ರ ದೂರದರ್ಶನ ಭವನ, ಜೆ.ಸಿ.ನಗರ, ಬೆಂಗಳೂರು – ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
9. ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಇಲಾಖೆ ಮೈಸೂರು ಜಿಲ್ಲೆ, ಮೈಸೂರು.
10. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.
11. ಡೀನ್(ಶೈಕ್ಷಣಿಕ), ಕರಾಮುವಿ, ಮೈಸೂರು.
12. ಕುಲಸಚಿವ(ಪರೀಕ್ಷಾಂಗ), ಕರಾಮುವಿ, ಮೈಸೂರು.
13. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
14. ಡೀನ್ (ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
15. ಮುಖ್ಯಸ್ಥರು, ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
16. ಉಪಕುಲಸಚಿವರು,ಸಾಮಾನ್ಯ/ಕಾನೂನ ಘಟಕ, ಕರಾಮುವಿ, ಮೈಸೂರು.
17. ಎಲ್ಲಾ ನಿರ್ದೇಶಕರು/ಸಂಯೋಜನಾಧಿಕಾರಿಗಳು, ಕರಾಮುವಿ, ಮೈಸೂರು.
18. ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
19. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು. ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
20. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
21. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
22. ಕಛೇರಿ ಸೂಚನಾ ಫಲಕಕ್ಕೆ.
23. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತ ಗಂಗೋತ್ರಿ, ಮೈಸೂರು - 570 006.

| ಅರ್ಜಿ ಸಂಖ್ಯೆ: | "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" | ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಅಂಟಿಸಿ |
|---|---|---|

ಹೈದ್ರಾಬಾದ್-ಕರ್ನಾಟಕ ಮೀಸಲಾತಿ ನಿಯಮ ಅನುಚ್ಛೇದ 371(J)ರನ್ವಯ ಸ್ಥಳೀಯ ಅಭ್ಯರ್ಥಿ ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದ ಅರ್ಜಿ ನಮೂನೆ

**ಕರಾಮುವಿ ನಿಲಯದಲ್ಲಿ ಹೈದ್ರಾಬಾದ್-ಕರ್ನಾಟಕ 371(J)ನಿಯಮಗಳಡಿ ಬೋಧಕೇತರ ಹುದ್ದೆಯ ನೇಮಕಾತಿಗೆ ಅರ್ಜಿ**

(ಎಂಟು ಪ್ರತಿಗಳಲ್ಲಿ ಪೂರಕ ದಾಖಲಾತಿಗಳೊಂದಿಗೆ ಸಲ್ಲಿಸಬೇಕು)

**01.** ಅಭ್ಯರ್ಥಿ ಹೆಸರು:
(ದಪ್ಪ ಅಕ್ಷರಗಳಲ್ಲಿ)

| **02.** ಖಾಯಂ ವಿಳಾಸ:<br><br>ದೂರವಾಣಿ ಸಂಖ್ಯೆ: | **02(ಎ).**ಅಂಚೆ ವಿಳಾಸ:<br><br>ದೂರವಾಣಿ ಸಂಖ್ಯೆ: |
|---|---|
| **03.**ತಂದೆ/ತಾಯಿ/ಗಂಡನ/ಪೋಷಕರ ಹೆಸರು: | |
| **04.**ಜನ್ಮ ದಿನಾಂಕ (SSLC ಅಂಕಪಟ್ಟಿಯಲ್ಲಿರುವಂತೆ ಅಥವಾ ಜನ್ಮಪ್ರಮಾಣ ಪತ್ರದಲ್ಲಿರುವಂತೆ) ಮತ್ತು ವಯಸ್ಸು | |
| **05.**ಜನ್ಮಸ್ಥಳ, ಜಿಲ್ಲೆ ಮತ್ತು ರಾಜ್ಯ | |
| **06.**ರಾಷ್ಟ್ರೀಯತೆ | |
| **07.371(J)**ಗೆ ಮೀಸಲಾತಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದಿರುವ ಪ್ರಮಾಣ ಪತ್ರದ ವಿವರಗಳು(ದೃಡೀಕೃತ ಪ್ರತಿ ಲಗತ್ತಿಸಬೇಕು):<br>(ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ಒಳಗಾಗಿ ಪಡೆದಿರತಕ್ಕದ್ದು) | |
| **08.(ಅ).**ನೀವುಸಾಮಾನ್ಯ/ಪ.ಜಾ/ಪ.ಪಂ/ಹಿಂದುಳಿದ(ವರ್ಗ1/2ಎ/2ಬಿ/3ಎ/3ಬಿ) ವರ್ಗಕ್ಕೆ ಸೇರಿದವರೆ? ಹಾಗಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದಿರುವ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಿ.<br>**(ಆ).** ನೀವು ಒಳ ಮೀಸಲಾತಿ ಕೋರುವುದಿದ್ದಲ್ಲಿ ಪ್ರಮಾಣ ಪತ್ರದ ಪ್ರತಿ ಲಗತ್ತಿಸಿಸಬೇಕು (ಗ್ರಾಮೀಣ/ಮಹಿಳೆ/ಮಾಜಿ ಸೈನಿಕ/ವಿಶೇಷ ಚೇತನರ/ಕನ್ನಡ ಮಾಧ್ಯಮ/ ಯೋಜನೆ ನಿರಾಶ್ರಿತರು) | |
| **09.**ಲಿಂಗ: ಗಂಡು / ಹೆಣ್ಣು | |
| **10.(ಅ).**ನೀವು ಈ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿದ್ದಲ್ಲಿ | |

**(ಆ).** ಅರ್ಹತಾ ಪರೀಕ್ಷೆಯ ಹೆಸರು ಮತ್ತು ಉತ್ತೀರ್ಣ ಹೊಂದಿದ ವರ್ಷವನ್ನು ನಮೂದಿಸಿ

| ಪರೀಕ್ಷೆಯ ಹೆಸರು | ಉತ್ತೀರ್ಣ ಹೊಂದಿರುವ ವರ್ಷ |
|---|---|
| | |
| | |
| | |
| | |
| | |

**(ಇ). ಶಾಲೆ / ಕಾಲೇಜು ವ್ಯಾಸಂಗ ಮಾಡಿದ ವಿವರಗಳು**

| ಶಾಲೆ/ಕಾಲೇಜು/ವಿವಿ ನಿಲಯದ ಹೆಸರು ಮತ್ತು ವಿಳಾಸ | ಸೇರಿದ ದಿನಾಂಕ | ಬಿಟ್ಟ ದಿನಾಂಕ | ಉತ್ತೀರ್ಣ ಹೊಂದಿದ ಪರೀಕ್ಷೆ | ಗರಿಷ್ಠ ಅಂಕ | ಗಳಿಸಿದ ಅಂಕ | ಗಳಿಸಿದ ವರ್ಗ/ಶ್ರೇಣಿ | ಗಳಿಸಿದ ಶೇಕಡಾವಾರು ಅಂಕ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |

| | |
|---|---|
| **11.**ಯಾವುದಾದರೂ ಸರ್ಕಾರಿ/ಅರೆ ಸರ್ಕಾರಿ ಕಛೇರಿ/ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ/ ವಿಶ್ವವಿದ್ಯಾನಿಲಯ/ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸಿದ್ದಲ್ಲಿ ಅದರ ವಿವರವನ್ನು ನೀಡುವುದು (ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರು ತಮ್ಮ ಅರ್ಜಿಯನ್ನು ತಮ್ಮ ಕಛೇರಿಯ ಮುಖ್ಯಸ್ಥರ ಮೂಲಕ ಅರ್ಜಿಯಲ್ಲಿರುವ ನಮೂನೆಯಲ್ಲಿ ಕಳುಹಿಸುವುದು. | |
| **12.(ಅ).**ದೇಹದಲ್ಲಿರುವ ಗಮನಾರ್ಹ ಗುರುತುಗಳು | |

| | | | | |
|---|---|---|---|---|
| **(ಆ).** ನೀವು ಅರ್ಜಿಯ ಜೊತೆಯಲ್ಲಿ ತಮ್ಮ ಭಾವಚಿತ್ರವನ್ನು ಅಂಟಿಸಿದ್ದೀರಾ? | ಹೌದು | | ಇಲ್ಲ | |

ಪು.ತಿ.ನೋ

| | |
|---|---|
| **13.**ನಡತೆ ಪ್ರಮಾಣ ಪತ್ರವನ್ನು ಈ ಕೆಳಕಂಡವರಿಂದ ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕು.<br>(ಅ).ತಾವು ಕೊನೆಯದಾಗಿ ವ್ಯಾಸಂಗ ಮಾಡಿದ ಶಾಲೆ / ಕಾಲೇಜಿನ ಮುಖ್ಯಸ್ಥರಿಂದ ಹಾಗೂ<br>(ಆ).ಅಭ್ಯರ್ಥಿಗೆ ಸಂಬಂಧವಿಲ್ಲದ ಸಮಾಜದ ಗೌರವಾನ್ವಿತ ವ್ಯಕ್ತಿಯಿಂದ ದೃಢೀಕರಣ ನೀಡುವುದು (ಈ ಪತ್ರವು ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆಯ ದಿನಾಂಕದಿಂದ ಆರು ತಿಂಗಳ ಒಳಗಿರಬೇಕು) | |
| **14.** ಅರ್ಜಿ ಶುಲ್ಕ ಪಾವತಿಸಿರುವ ವಿವರ: | ಆನ್‌ಲೈನ್ ರಶೀದಿ ಸಂಖ್ಯೆ:<br>ದಿನಾಂಕ: ಮೊತ್ತ: ರೂ. |

**15.**ಅರ್ಜಿಯೊಡನೆ ಲಗತ್ತಿಸಿರುವ ಅಡಕಗಳು

**16.**(ಅ).ನೀವು ಯಾವುದಾದರೂ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದೀರಾ/ ಬಂಧನಕ್ಕೊಳಗಾಗಿದ್ದೀರಾ/ನ್ಯಾಯಾಲಯದಿಂದ ಯಾವುದಾದರೂ ಅಪರಾಧಕ್ಕೆ ಶಿಕ್ಷೆಗೊಳಪಟ್ಟಿದ್ದೀರಾ ? ಅರ್ಜಿ ಭರ್ತಿ ಮಾಡುವ ಸಮಯಕ್ಕೆ ನಿಮ್ಮ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಯಾವುದಾದರೂ ಪ್ರಕರಣಗಳು ಬಾಕಿ ಇದೆ/ವೆಯೇ:
(ಆ). ಅಂತಹ ಪ್ರಕರಣ ಇದ್ದಲ್ಲಿ ಸದರಿ ಪ್ರಕರಣ/ಬಂಧನ/ಶಿಕ್ಷೆ, ಇತ್ಯಾದಿಗಳ ಪೂರ್ಣ ವಿವರ ನೀಡುವುದು. :

**17.**(ಅ).ನೀವು ಈ ಹಿಂದೆ ವಿಶ್ವವಿದ್ಯಾನಿಲಯ/ಶಿಕ್ಷಣ ಇಲಾಖೆ/ಕೆ.ಪಿ.ಎಸ್.ಸಿ/ ಕೇಂದ್ರ/ರಾಜ್ಯ ಸರ್ಕಾರಗಳಿಂದ ನಡೆಸಲ್ಪಟ್ಟ ಯಾವುದಾದರೂ ಪರೀಕ್ಷೆಯಿಂದ ನಿರ್ಬಂಧನಕ್ಕೊಳಗಾಗಿದ್ದೀರಾ ? :

(ಆ).ಉತ್ತರ ಹೌದಾದಲ್ಲಿ ಪೂರ್ಣ ವಿವರ ನೀಡುವುದು. :

**18.**(ಅ).ನೀವು ಯಾವುದಾದರೂ ವಿಶ್ವವಿದ್ಯಾನಿಲಯದ ಸೇವೆಯಿಂದ ವಜಾ/ತೆಗೆದು ಹಾಕಲ್ಪಟ್ಟಿದ್ದೀರಾ ? :
(ಆ). ಉತ್ತರ ಹೌದಾದಲ್ಲಿ ಪೂರ್ಣ ವಿವರ ನೀಡುವುದು. :

**19.** ಅಭ್ಯರ್ಥಿಯು ನೀಡಬಯಸುವ ಇನ್ನಿತರ ಮಾಹಿತಿಗಳು

## ಘೋಷಣೆ

ಈ ಮೂಲಕ ನಾನು ಘೋಷಿಸುವುದೇನೆಂದರೆ, ನಾನು 371(ಜೆ) ಸ್ಥಳೀಯ ಅಭ್ಯರ್ಥಿಯಾಗಿದ್ದೇನೆ. ಈ ಅರ್ಜಿಯಲ್ಲಿ ನೀಡಿರುವ ಎಲ್ಲಾ ಹೇಳಿಕೆಗಳು ನನ್ನ ಸಂಪೂರ್ಣ ತಿಳುವಳಿಕೆಯಿಂದ ಮತ್ತು ನಂಬಿಕೆಯನುಸಾರ ಸರಿಯಾಗಿದ್ದು ಮತ್ತು ಸತ್ಯಾಂಶದಿಂದ ಕೂಡಿರುತ್ತವೆ. ಆಯ್ಕೆ / ನೇಮಕಾತಿಯ ಮುಂಚೆ ಅಥವಾ ನಂತರ ಯಾವುದೇ ಹಂತದಲ್ಲಿ ನಾನು ನೀಡಿರುವ ಯಾವುದೇ ಮಾಹಿತಿಯಲ್ಲಿ ತಪ್ಪುಗಳೂ ಇದ್ದು, ನಾನು ಬಯಸುವ ಹುದ್ದೆಯ ಅಭ್ಯರ್ಥನಕ್ಕೆ ಅನರ್ಹವಾಗಿದೆಯೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವು ತಿರಸ್ಕೃತವಾಗುತ್ತದೆಂದು ನಾನು ತಿಳಿದಿದ್ದೇನೆ, ತತ್ಸಂಬಧ ನಾನು ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧನಾಗಿದ್ದೇನೆ.

ಸ್ಥಳ:
ದಿನಾಂಕ: ಅಭ್ಯರ್ಥಿಯ ಸಹಿ

## ಸೂಚನೆ

ಅಭ್ಯರ್ಥಿಗಳು ಈಗಾಗಲೇ ಸರ್ಕಾರಿ ಸೇವೆಯಲ್ಲಿದ್ದರೆ ತಮ್ಮ ಅರ್ಜಿಯನ್ನು ತಾವು ಸೇವೆ ಸಲ್ಲಿಸುತ್ತಿರುವ ಇಲಾಖೆಯ ಮುಖ್ಯಸ್ಥರ ಮೂಲಕ ಒಂದು ವೇಳೆ ಆಯ್ಕೆಯಾದಲ್ಲಿ ತಮ್ಮನ್ನು ಸದರಿ ಇಲಾಖೆಯಿಂದ ಬಿಡುಗಡೆ ಮಾಡಲು ಅಭ್ಯಂತರವಿಲ್ಲವೆಂದು ಷರಾದೊಂದಿಗೆ ಅರ್ಜಿಯನ್ನು ಕಳುಹಿಸಬೇಕು.

(ಅ) ಶ್ರೀ/ಶ್ರೀಮತಿ ಇವರು ಹುದ್ದೆಯಲ್ಲಿ ತಾತ್ಕಾಲಿಕವಾಗಿ / ಖಾಯಂ ಆಗಿ ದಿನಾಂಕ: ರಿಂದ ಸೇವೆ ಸಲ್ಲಿಸುತ್ತಿದ್ದಾರೆಂದು ದೃಢೀಕರಿಸಲಾಗಿದೆ.
(ಆ) ಇವರು ದಿನಾಂಕ: ರಂದು ಈ ಅರ್ಜಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಈ ಇಲಾಖೆಗೆ ಸಲ್ಲಿಸಿರುತ್ತಾರೆ.
(ಇ) ಶ್ರೀ ಇವರು ಒಂದು ವೇಳೆ ಆಯ್ಕೆಯಾದಲ್ಲಿ ಸದರಿಯವರನ್ನು ಈ ಇಲಾಖೆಯ ಸೇವೆಯಿಂದ ಬಿಡುಗಡೆ ಗೊಳಿಸಲಾಗುವುದೆಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳ: ಇಲಾಖೆಯ ಮುಖ್ಯಸ್ಥರ ಸಹಿ
ದಿನಾಂಕ: ಪದನಾಮ ಮತ್ತು ಇಲಾಖೆಯ ಮೊಹರು